**<u>ಸಾಕ್ಷಿಯನ್ನು ದಿಃ 15.05.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ.ಜೆ.ಬಿ. ವಕೀಲರಿಂದಃ</u>**

1ನೇ ಆರೋಪಿ ನಿಪಿ-1 ರಿಂದ 4 ಚೆಕ್ ಗಳನ್ನು ಹೊರತುಪಡಿಸಿ ಬೇರೆ ಯಾವುದೇ ಚೆಕ್ ಗಳನ್ನು ನನಗೆ ನೀಡಿಲ್ಲ. 1ನೇ ಆರೋಪಿ ವಿರುದ್ಧ ದಾಖಲಿಸಿದ ಚೆಕ್ ಬೌನ್ಸ್ ಪ್ರಕರಣದ ಮೂಲ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ದಾಖಲೆಗಳ ಮೂಲ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಈ ಪ್ರಕರಣದ ಕಡತದಲ್ಲಿರುವ ಸಂಪೂರ್ಣ ಮಾಹಿತಿಯನ್ನು ನಾನು ತಿಳಿದುಕೊಂಡಿದ್ದೇನೆ. ಪೊಲೀಸರು ದೋಷರೋಪಣಾ ಪಟ್ಟಿಯ ಪೇಜ್ ನಂ.33 ಮತ್ತು 34 ರಂತೆ ನ್ಯಾಯಾಲಯಕ್ಕೆ ಸಲ್ಲಿಸಿರುವ ಬಸವನಗುಡಿ ಶಾಖೆಯ ಕೆನರಾ ಬ್ಯಾಂಕಿನ ಸ್ಟೇಟ್‌ಮೆಂಟ್ ಯಾರಿಗೆ ಸಂಬಂಧಿಸಿದ್ದು ಗೊತ್ತಿಲ್ಲ. ನನಗೆ ತೋರಿಸಿದ ಆ ಬಸವನಗುಡಿ ಶಾಖೆಯ ಕೆನರಾ ಬ್ಯಾಂಕಿನ ಸ್ಟೇಟ್ ಮೆಂಟ್ ನಲ್ಲಿ 2ನೇ ಆರೋಪಿಯ ಬಗ್ಗೆ ಡೀಟೇಲ್ಸ್ ಇದಿಯೋ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಾಗುವುದಿಲ್ಲ.

ದೋಷರೋಪಣಾ ಪಟ್ಟಿಯ ಪೇಜ್ ನಂ.35 ರಿಂದ 37 ರಲ್ಲಿರುವಂತೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಆ ಹೇಳಿಕೆಯನ್ನು 2016 ರಲ್ಲಿ ಮದ್ಯಾಹ್ನದ ಸಮಯದಲ್ಲಿ ಕೊಟ್ಟಿದ್ದೇನೆ. ಹೇಳಿಕೆ ನೀಡಿದ ನಿಖರವಾದ ದಿನಾಂಕ ಮತ್ತು ಸಮಯ ನನಗೆ ನೆನಪಿಲ್ಲ. ದಿನಾಂಕ ಮತ್ತು ಸಮಯವನ್ನು ಹೇಳಿಕೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಬಸವನಗುಡಿ ಠಾಣೆಗೆ ಹೋದಾಗ ಅಲ್ಲಿ ಕ್ಲರ್ಕ್ ನನ್ನನ್ನು ವಿಚಾರಣೆ ಮಾಡಿ ಸ್ಟೇಟ್‌ಮೆಂಟ್ ಟೈಪ್ ಮಾಡಿ ನನ್ನ ಸಹಿ ಪಡೆದು ಕಳುಹಿಸಿಕೊಟ್ಟರು. ದೋಷರೋಪಣಾ ಪಟ್ಟಿಯ ಪೇಜ್ ನಂ.35 ರಲ್ಲಿ ನನ್ನ ಸಹಿ ಇಲ್ಲ. ದೋಷರೋಪಣಾ ಪಟ್ಟಿಯ ಪೇಜ್ ನಂ.36 ರಲ್ಲಿ ಕೆಳಗಡೆ ಸಹಿ ಇಲ್,

ಆದರೆ ನನ್ನ ಹೇಳಿಕೆಯ ಎಡಭಾಗದಲ್ಲಿ ಸಹಿ ಇದೆ. ನನ್ನ ಹೇಳಿಕೆಯ ಕೆಳಭಾಗದಲ್ಲಿ ಏಕೆ ನನ್ನ ಸಹಿ ಮಾಡಿಸಿಲ್ಲ ಗೊತ್ತಿಲ್ಲ. ಈ ಪ್ರಕರಣದಲ್ಲಿ ನಾನು ಒಬ್ಬ ಸಾಕ್ಷಿದಾರ ಮಾತ್ರ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ದೂರದಾರನಲ್ಲ ಎಂದರೆ ಸರಿ. ನನ್ನ ತರಹ ಹಣ ಕಳೆದುಕೊಂಡಿರುವವರು ತುಂಬಾ ಜನರು ಇದ್ದಾರೆ, ಅವರೆಲ್ಲಾ ಕೇಸಿನಲ್ಲಿ ಸಾಕ್ಷಿಯಾಗಿ ಬಂದಿಲ್ಲ. ಹಣ ಕಳೆದುಕೊಂಡ ಒಬ್ಬರು ದೂರುದಾರರಾಗಿದ್ದಾರೆ. ನಾನು ಕೂಡ ಹಣ ಕಳೆದುಕೊಂಡಿದ್ದು ನಾನು ಈ ಕೇಸಿನಲ್ಲಿ ಸಾಕ್ಷಿದಾರನಾಗಿದ್ದೇನೆ. ನಾನು ಮತ್ತು ದೂರುದಾರರು 1ನೇ ಆರೋಪಿಯ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಿದ್ದೇವೆ ಎಂದರೆ ಸರಿ. 1ನೇ ಆರೋಪಿ ಸ್ವಲ್ಪ ಹಣ ವಾಪಸ್ಸು ಮಾಡಿದ್ದು ಉಳಿದ ಹಣಕ್ಕೆ ಚೆಕ್‌ಗಳನ್ನು ಕೊಟ್ಟಿದ್ದು ಅವುಗಳು ಅಮಾನ್ಯಗೊಂಡಾಗ ನಾನು ಮತ್ತು ದೂರುದಾರರು ಚೆಕ್ ಬೌನ್ಸ್ ಕೇಸಗಳನ್ನು ದಾಖಲಿಸಿದ್ದೇವೆ ಎಂದರೆ ಸರಿ. ಆ ಚೆಕ್ ಬೌನ್ಸ್ ಕೇಸಗಳಲ್ಲಿ ಕ್ರಮ ತೆಗೆದುಕೊಳ್ಳದ ಕಾರಣ ಅದು ವಜಾ ಆಗಿದೆ ಹಾಗಾಗಿ 2ನೇ ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧಿವಿಲ್ಲ ಎಂದರೆ ಸಾಕ್ಷಿ 1ನೇ ಆರೋಪಿ ಸುದಿಂದ್ರನಾಥ್ ಯಾರೆಂದು ಗೊತ್ತಿರಲಿಲ್ಲ. ಆ ನಂತರ ಅದರಲ್ಲಿ ಯಾರೆಲ್ಲಾ ಇದ್ದಾರೆ ಎಂದು ಗೊತ್ತಾಯಿತು, ಬ್ಲೂನಿಶು ಟ್ರೆಂಡ್ ಲಿಂಕ್ ಕಂಪನಿಯ ಎಲ್ಲರು ಕೂಡ ಜವಬ್ದಾರರು ಎಂದು ಹೇಳುತ್ತಾರೆ.

2ನೇ ಆರೋಪಿಯಿಂದ ಹಣ ತೆಗೆದುಕೊಳ್ಳಲು ನಾನು ಮತ್ತು ದೂರುದಾರರು ಪೊಲೀಸರ ಮೂಲಕ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸುವಂತೆ ಮಾಡಿ 2ನೇ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. 2ನೇ ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆಯಿಸಿ ರಾಜಿ ಮಾಡಿಕೊಳ್ಳಿ ಎಂದು ಹೇಳಿದ್ದು ಅದಕ್ಕೆ ಒಪ್ಪದ ಕಾರಣ ನಾವು ಸುಳ್ಳು ಪ್ರಕರಣ ದಾಖಲಾಗುವಂತೆ ಮಾಡಿದ್ದೇವೆ ಎಂದರೆ ಸುಳ್ಳು. 1ನೇ ಆರೋಪಿಯನ್ನು ನಾನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ. ಪೊಲೀಸರು 1ನೇ ಆರೋಪಿಯನ್ನು ಕರೆದುಕೊಂಡು ಬಂದಿಲ್ಲ. ನಾನು ಮತ್ತು ನನ್ನ ಕಡೆಯವರು ಹೊಡೆದ ಕಾರಣ 1ನೇ

ಆರೋಪಿ ಸಿಗದೆ ಇದ್ದು ಅವರು ಕಾಣೆಯಾಗಲು ನಾನೇ ಕಾರಣ ಎಂದರೆ ಸುಳ್ಳು. ಸಾಕ್ಷಿ ಸ್ವತಃ 1ನೇ ಆರೋಪಿ ಹಣ ಕೊಡದೆ ತಪ್ಪಿಸಿಕೊಂಡು ಓಡಿ ಹೋಗಿದ್ದಾರೆ. 1ನೇ ಆರೋಪಿ ಕಾಣೆಯಾದ ಕಾರಣ ಚೆಕ್ ಬೌನ್ಸ್ ಪ್ರಕರಣಕ್ಕೆ ಹೋಗಿಲ್ಲ ಎಂದರೆ ಸುಳ್ಳು. 2ನೇ ಆರೋಪಿ ಬಿಡುಗಡೆಗೆ ಅರ್ಹರು ಎಂದರೆ ಸುಳ್ಳು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**